**ಸಾಕ್ಷಿಯನ್ನು ದಿನಾಂಕಃ 07.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ನಾನು ಎನ್. ಬೇಗೂರಿನ ಚಾಮಯ್ಯನ ಹಾಡಿಯ ವಾಸಿಯಾಗಿರುತ್ತೇನೆ. ನನ್ನ ಜಮೀನು ಸಹ ಎನ್. ಬೇಗೂರು ಗ್ರಾಮದಲ್ಲಿರುತ್ತದೆ. ಸಾಕ್ಷಿ ಮುಂದುವರೆದು ವಾದಿ ಹಾಗು ಪ್ರತಿವಾದಿಗಳ ಜಮೀನಿನ ಪಕ್ಕ ಇರುತ್ತದೆಂದು ನುಡಿಯುತ್ತಾರೆ. ನನ್ನ ಜಮೀನಿನ ಸ.ನಂ. ಸಹ 43 ಆಗಿರುತ್ತದೆ. ಸದರಿ ಸ.ನಂ. 43 ರ ಜಮೀನು ಇನ್ನೂ ದುರಸ್ತಿಯಾಗಿರುವುದಿಲ್ಲ ಎಂದರೆ ಸರಿ. ನನಗೆ ವಾದಿಗಳ ಪರಿಚಯವಿರುವುದಿಲ್ಲ. 1 ನೇ ಪ್ರತಿವಾದಿಯ ತಾಯಿಯ ಹೆಸರು ದೇವಮ್ಮ ಎಂಬುದಾಗಿದ್ದು ನನಗೆ ಅವರ ಪರಿಚಯವಿರುತ್ತದೆ. ಸದರಿ ದೇವಮ್ಮರವರಿಗೆ ಸರ್ಕಾರದಿಂದ ಜಮೀನು ಮಂಜೂರಾಗಿರುತ್ತದೆ. ಆ ರೀತಿ ಮಂಜೂರಾದ ಬಗ್ಗೆ ಕಂದಾಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನಗೂ ಸಹ ಜಮೀನು ಸರ್ಕಾರದಿಂದ ದರ್ಖಾಸ್ತು ಮೂಲಕ ಬಂದಿದ್ದು ಇನ್ನು ಸಾಗುವಳಿ ಪತ್ರ ನೀಡಿರುವುದಿಲ್ಲ. ನನ್ನ ಹಾಗು ದೇವಮ್ಮರವರ ಹೆಸರಿನಲ್ಲಿ ಸದರಿ ಮಂಜೂರಾದ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಕಂದಾಯ ದಾಖಲೆಗಳು ಬರುತ್ತಿಲ್ಲ. ಸಾಕ್ಷಿ ಮುಂದುವರೆದು ಹಿಂದೆ ಕೈ-ಬರಹದ ಪಹಣಿ ಪತ್ರಿಕೆ ಬಂದಿರುತ್ತದೆಂದು ನುಡಿಯುತ್ತಾರೆ. ನಾನು ಸರ್ಕಾರಕ್ಕೆ ಯಾವುದೇ ಕಂದಾಯ ಕಟ್ಟಿರುವುದಿಲ್ಲ. ಸದರಿ ಬೇಗೂರು ಗ್ರಾಮದ ಸ.ನಂ. 43 ರ ಜಮೀನಿನಲ್ಲಿ ಸುಮಾರು ಜನರಿಗೆ ಸರ್ಕಾರದಿಂದ ಮಂಜೂರಾತಿ ಆದೇಶ ಮಾಡಿ ಸಾಗುವಳಿ ಪತ್ರ ನೀಡಿರುತ್ತಾರೆಂದರೆ ಸಾಕ್ಷಿಯು ನೀಡಿರಬಹುದೆಂದು ನುಡಿಯುತ್ತಾರೆ. ಅದೇ ರೀತಿ ದಾವಾ ಆಸ್ತಿಯು 5 ರಿಂದ 9 ಹಾಗು 12 ನೇ ವಾದಿಗಳ ತಂದೆಯಾದ ಚೆನ್ನಶೆಟ್ಟಿಯವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಚೆನ್ನಶೆಟ್ಟಿ ತೀರಿಹೋದ ನಂತರ ಅವರ

ಹೆಂಡತಿ-ಮಕ್ಕಳ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ವರ್ಗಾವಣೆಯಾಗಿರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಸದರಿ ಚೆನ್ನಶೆಟ್ಟಿಯವರಿಗೆ ಮಂಜೂರಾದ ದಿನದಿಂದ ಅವರ ಜೀವಿತಾವಧಿಯವರಿಗೆ ಸದರಿ ಚೆನ್ನಶೆಟ್ಟಿ ಹಾಗು ಅವರ ಹೆಂಡತಿ-ಮಕ್ಕಳು ಹಾಗು ಅವರ ಮರಣದ ನಂತರ ಅವರ ಹೆಂಡತಿ-ಮಕಳು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗಳೇ ಸದರಿ ಆಸ್ತಿಯ ಸ್ವಾಧೀನದಲ್ಲಿರುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ನನ್ನ ಹಾಗು ನನ್ನ ಅಕ್ಕನಾದ ಮಹದೇವಮ್ಮರವರ ಜಮೀನು ಇರುತ್ತದೆಂದರೆ ಸರಿ. ದಾವಾ ಆಸ್ತಿಗು ಮತ್ತು ಪ್ರತಿವಾದಿಗಳಿಗು ಯಾವುದೇ ಸಂಬಂಧವಿರುವುದಿಲ್ಲ ಹಾಗು ಅವರು ಅದರ ಸ್ವಾಧೀನಾನುಭವದಲ್ಲಿರುವುದಿಲ್ಲ ಬದಲಾಗಿ ನಾನು ಪ್ರತಿವಾದಿಗಳು ಸ್ವಾಧೀನದಲ್ಲಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳ ಸ್ವಾಧೀನಾನುಭವ ಹೊಂದಿರುವ ದಾವಾ ಆಸ್ತಿಗೆ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದರಿಂದ ವಾದಿಗಳು ಪ್ರತಿವಾದಿಗಳ ವಿರುದ್ಧ ಈ ದಾವೆ ಹೂಡಿರುತ್ತಾರೆಂದರೆ ಸರಿಯಲ್ಲ. ನಾನು ಹಾಗು ಪ್ರತಿವಾದಿಗಳು ಒಂದೇ ಊರಿನಲ್ಲಿರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**